ಆಂಧ್ರದವರು ಇನ್ನೂರು ಮೈಲಿ ಕೊಡಬೇಕು ಇದನ್ನು ಯಾವ ಬೇಸಿಸ್ ಮೇಲೆ ಅನುಸರಿಸಿಕೊಂಡು ಹೋಗುತ್ತಿದ್ದೀರಿ ಬಸ್ ಟು ಬಸ್ ಪ್ಯಾರಿಟಿ ಅಥವಾ ಕಿಲೋಮೀಟರ್ ಟು ಕಿಲೋಮೀಟರ್ ಪ್ಯಾರಿಟಿಯೇ ? ಇದರಿಂದ ಕರ್ನಾಟಕಕ್ಕೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಸಿದ್ಧರಾಮಯ್ಯ.— ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಅಂತರ ರಾಜ್ಯ ಒಪ್ಪಂದಗಳ ಮೇಲೆ ಓಡಿಸತಕ್ಕ ಬಸ್ಸುಗಳಿಗೆ ಪ್ಯಾರಿಟಿ ಇಲ್ಲ, ದೂರದ ಪ್ಯಾರಿಟಿ ಇಲ್ಲ ಹೀಗಾಗಿ ನಮ್ಮ ಕರ್ನಾಟಕ ರಾಜ್ಯಕ್ಕೆ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಇದಕ್ಕೆ ನಮಗೆ ಅಹಿತಕರವಾಗಿಲ್ಲ, ನಷ್ಟವಾಗಿಲ್ಲ ಎಂಬ ಉತ್ತರವನ್ನು ಕೊಟ್ಟಿದ್ದೇವೆ. ಒಪ್ಪಂದದ ಪ್ರಕಾರ ಕೆಲವು ರಾಜ್ಯಗಳಿಗೆ ಹೋಲಿಸಿದರೆ,ಕಿಲೋಮೀಟರ್ ಪ್ಯಾರಿಟಿಯಲ್ಲಿ ಅವರಿಗಿಂತ ಹೆಚ್ಚು ಕಿಲೋಮೀಟರನ್ನು ನಾವು ಓಡಿಸಿದ್ದೇವೆ ಕರ್ನಾಟಕದವರು ಆಂಧ್ರಪ್ರದೇಶದಲ್ಲಿ ೧,೧೫,೬೭೩ ಕಿಲೋಮೀಟರ್ ಓಡಿಸಿದ್ದೇವೆ. ಆಂಧ್ರದವರು ೧,೦೨,೯೦೬ ಕಿಲೋಮೀಟರ್ ಓಡಿಸಿದ್ದಾರೆ. ಇದರಿಂದ ಅವರಿಗಿಂತ ನಮಗೇ ೨,೬೬೭ ಕಿಲೋಮೀಟರ್ ಅಡ್ವಾಂಟೇಜ್ ಇದೆ. ನಾವೇ ಅವರಿಗಿಂತ ಹೆಚ್ಚಾಗಿ ಓಡಿಸಿದ್ದೇವೆಂಬುದು ಗೊತ್ತಾಗುತ್ತದೆ. ಇದರಿಂದ ನಮಗೆ ಹೆಚ್ಚು ಲಾಭವಾಗಿದೆ. ಅಹಿತಕರವಾಗಿರುವುದು ಏನೂ ಇಲ್ಲ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾವಮಯ್ಯ.— ಈಗಲೂ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮದ್ರಾಸ್–ಬೆಂಗಳೂರು ನಡುವೆ ಕರ್ನಾಟಕದ ಬಸ್ಸುಗಳು ೫೬ ಇದ್ದರೆ, ಆಂಧ್ರ ಬಸ್ಸುಗಳು ೨೦ ಇರುತ್ತವೆ. ತಮಿಳುನಾಡಿನ ಬಸ್ಸುಗಳು ೨೬ಕ್ಕಿಂತ ಜಾಸ್ತಿ ಇರುತ್ತವೆ. ಈ ರೀತಿ ನಡೆಯುತ್ತಿದ್ದರೂ ಕೂಡ ಮಾನ್ಯ ಮಂತ್ರಿಗಳು ಇದನ್ನು ವೆರಿಫೈ ಮಾಡಿ, ಅನ್ಯಾಯವಾಗುತ್ತಿದೆ ಇದನ್ನು ಸರಿಪಡಿಸುತ್ತೇವೆ ಎಂದು ಹೇಳತಕ್ಕ ಸೌಜನ್ಯವನ್ನೂ ತೋರಿಸುತ್ತಿಲ್ಲ. ಆಮೇಲೆ ತಿರುಪತಿ ಟು ಬೆಂಗಳೂರು, ಅವರ ಬಸ್ಸುಗಳು ೨೦ ಓಡುತ್ತಿದ್ದರೆ, ನಮ್ಮ ಬಸ್ಸುಗಳು ಕೇವಲ ೫ ಓಡುತ್ತಿದೆ. ವೆಲ್ಲೂರಿನ ಟು ಬೆಂಗಳೂರು, ತಮಿಳುನಾಡಿನವರು ೧೦ ಬಸ್ಸುಗಳನ್ನು ಓಡಿಸುತ್ತಿದ್ದರೆ, ನಮ್ಮದು ಕೇವಲ ೪ ಬಸ್ಸುಗಳು ಮಾತ್ರ ಓಡುತ್ತಿವೆ ಮದ್ರಾಸ್ ಟು ಬೆಂಗಳೂರು ಕೂಡ ಅವರದೇ ಜಾಸ್ತಿ ಇದೆ. ಇದರಿಂದ ನಮ್ಮ ಕರ್ನಾಟಕಕ್ಕೆ ಏಕೆ ಅನ್ಯಾಯವಾಗಬೇಕು ? ಬಸ್ ಟು ಬಸ್ ಪ್ಯಾರಿಟಿ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆಮೇಲೆ ಟ್ಯಾಕ್ಸ್ ಬಗ್ಗೆ ಸ್ಪಷ್ಟವಾಗಿ ೩ ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆ. ಅವರಿಗೆ ಲಾಭ ಉಂಟು. ಆದ್ದರಿಂದ ಈ ನಷ್ಟವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಸಿದ್ದರಾಮಯ್ಯ.— ತಮಿಳುನಾಡು ಮತ್ತು ಕರ್ನಾಟಕದಲ್ಲಿ ಬಸ್ಸುಗಳ ಪ್ಯಾರಿಟಿ ಇಲ್ಲ ಎಂಬ ಮಾತನ್ನು ಹೇಳುತ್ತೇನೆ. ಇನ್ನು ದೂರದಲ್ಲಿ ಅವರಿಗಿಂತ ಹೆಚ್ಚು ದೂರವನ್ನು ನಾವು ಓಡಿಸುತ್ತಿದ್ದೇವೆ. ಇದು ಹಿಂದೆ ಆದಂಥ ಅಂತರ ರಾಜ್ಯ ಒಪ್ಪಂದ. ಈ ಒಪ್ಪಂದದ ಪ್ರಕಾರ ನಡೆದುಕೊಂಡು ಬರುತ್ತಾ ಇದೆ. ಆಮೇಲೆ, ಮಧ್ಯೆ ಮಾತುಕತೆಗಳು ನಡೆದಿವೆ, ಆದರೂ ಕೂಡ ಒಪ್ಪಂದಕ್ಕೆ ಬಂದಿಲ್ಲ. ಮುಂದೆ ಒಪ್ಪಂದಕ್ಕೆ ಬಂದಮೇಲೆ, ಮಾನ್ಯ ಸದಸ್ಯರು ಹೇಳತಕ್ಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಬಸ್ಸುಗಳನ್ನು ಓಡಿಸಲಾಗುವುದು ಆಮೇಲೆ, ಅವರು ಹೆಚ್ಚು ಬಸ್ಸುಗಳನ್ನು ಓಡಿಸುತ್ತಾರೆ, ನಾವು ಕಡಿಮೆ ಬಸ್ಸುಗಳನ್ನು ಓಡಿಸುತ್ತಿದ್ದೇವೆ, ಇದರಿಂದ ಅವರಿಗೇ ಹೆಚ್ಚು ಲಾಭವಾಗುತ್ತಿದೆ ನಮಗೆ ನಷ್ಟವಾಗುತ್ತಿದೆ ಎಂಬ ಮಾತನ್ನೂ ಹೇಳಿದ್ದಾರೆ. ನಾನು ಈ ಎಲ್ಲಾ ವಿಚಾರಗಳ ಪ್ರಾಸ್ ಅಂಡ್ ಕಾನ್ಸ್ ನೋಡಿ ಮುಂದೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇನ್ನು ಟ್ಯಾಕ್ಸ್ ಬಗ್ಗೆ ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಯಾವರೀತಿ ಆಗುತ್ತಿದೆ ಎಂಬುದನ್ನು ನೋಡಿ, ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ಹೇಳುತ್ತೇನೆ.

ಬೆಂಗಳೂರು ನಗರ ಸಾರಿಗೆ ಬಸ್ಸುಗಳನ್ನು ದೇವನಹಳ್ಳಿ ತನಕ ವಿಸ್ತರಿಸುವ ಬಗ್ಗೆ

೩೦೧೯. ಶ್ರೀ ಪಿ. ಸಿ. ಮುನಿಸ್ವಾಮಿಯಪ್ಪ (ದೇವನಹಳ್ಳಿ).— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಂಗಳೂರು ನಗರ ಸಾರಿಗೆಯು ಕೆಂಪು ಫಲಕದ ಬಸ್ಸುಗಳನ್ನು ದೇವನಹಳ್ಳಿಯವರೆಗೆ ಓಡಿಸಲಾಗುತ್ತಿದೆಯೇ,

(ಅ) ದೇವನಹಳ್ಳಿವರೆಗೆ ಬೆಂಗಳೂರು ನಗರ ಸಾರಿಗೆಯ ಕೆಂಪು ಫಲಕದ ಬಸ್ಸುಗಳನ್ನು ಓಡಿಸದೇ ಇದ್ದಲ್ಲಿ ಈ ಮಾರ್ಗದಲ್ಲಿ ಎಲ್ಲಿಯವರೆಗೆ ನಗರ ಸಾರಿಗೆ ಬಸ್ಸುಗಳನ್ನು ಓಡಿಸಲಾಗುತ್ತಿದೆ.

(ಇ) ಸರ್ಕಾರದ ಮುಂದೆ ದೇವನಹಳ್ಳಿವರೆಗೆ ನಗರ ಸಾರಿಗೆಯ ಕೆಂಪು ಫಲಕ ಇರುವ ಬಸ್‌ಗಳನ್ನು ಓಡಿಸುವ ಯೋಜನೆ ಇದೆಯೆ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

(ಅ) ಇಲ್ಲ.

(ಆ) ಬೆಂಗಳೂರು–ದೇವನಹಳ್ಳಿ ರಸ್ತೆಯಲ್ಲಿ ಬರುವ ಭೂವನಹಳ್ಳಿ ಅಡ್ಡರಸ್ತೆ ಮಾರ್ಗವಾಗಿ ಭೂವನಹಳ್ಳಿಗೆ ಬೆಂಗಳೂರಿನಿಂದ ಸಬರ್ಬನ್ (ಕೆಂಪು ಫಲಕದ) ಬಸ್ಸನ್ನು ಓಡಿಸಲಾಗುತ್ತಿದೆ.

(ಇ) ಇಲ್ಲ.

೧೧–೩೦ ಎ.ಎಂ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಇಲ್ಲ ಎಂದೂ ಉತ್ತರ ಕೊಟ್ಟಿದ್ದಾರೆ ಎರಡನೇ ಪ್ರಶ್ನೆಗೆ, ಬೆಂಗಳೂರು ದೇವನಹಳ್ಳಿ ರಸ್ತೆಯಲ್ಲಿ ಭೂವನಹಳ್ಳಿವರೆಗೆ ಬೆಂಗಳೂರಿನಿಂದ ಕೆಂಪುಫಲಕದ ಸಬ್‌ಅರ್ಬನ್ ಬಸ್ ಓಡಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಇದನ್ನು ಮುಂದೆ ದೇವನಹಳ್ಳಿಯವರೆಗೆ ವಿಸ್ತರಿಸುವುದಕ್ಕೆ ಆಗುವುದಿಲ್ಲವೇ ? ಭೂವನಹಳ್ಳಿ ಬೆಂಗಳೂರಿನಿಂದ ೨೨ ಕಿಲೋಮೀಟರ್ ಅಂತರದಲ್ಲಿ ಇದೆ. ಅಲ್ಲಿಂದ ಮುಂದೆ ದೇವನಹಳ್ಳಿಗೆ ಮೂರು ಕಿಲೋಮೀಟರ್ ಮಾತ್ರ ಅಂತರ ಇರುವುದರಿಂದ, ಪ್ರತಿದಿನ ಪ್ರಯಾಣಿಕರು, ವರ್ತಕರು, ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಬೆಂಗಳೂರಿಗೆ ಬರುವುದರಿಂದ, ಏನು ಈ ಮೂರು ಕಿಲೋಮೀಟರ್ ಅಂತರ ಇದೆ ಅಲ್ಲಿವರೆಗೆ ಈ ಬಸ್ಸನ್ನು ವಿಸ್ತರಿಸಬೇಕು. ಇದರಿಂದ ಏನೂ ತೊಂದರೆಯಾಗಲಾರದು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೇ, ದೇವನಹಳ್ಳಿಗೆ ಬಿ.ಟಿ.ಎಸ್. ಬಸ್‌ಗಳನ್ನು ಓಡಿಸಬೇಕೆಂಬುದು ಅವರ ಪ್ರಶ್ನೆಯಾಗಿದೆ. ನಗರಸಭೆ ಸರಹದ್ದಿನ ವ್ಯಾಪ್ತಿಯಿಂದ ೨೨ ಕಿಲೋಮೀಟರ್‌ವರೆಗೆ ಬಿ.ಟಿ.ಎಸ್. ಬಸ್‌ಗಳನ್ನು ಓಡಿಸುವುದನ್ನು, ಬೆಂಗಳೂರಿಂದ ಸುತ್ತ ಎಲ್ಲಾ ಕಡೆ ಮಾಡುತ್ತಿದ್ದೇವೆ. ದೇವನಹಳ್ಳಿಗೆ ನಗರಸಭೆ ವ್ಯಾಪ್ತಿಯಿಂದ ೨೫.೨ ಕಿಲೋಮೀಟರ್ ಆಗುತ್ತದೆ. ದೇವನಹಳ್ಳಿ ಬಂದನ್ನೇ ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದರೆ ಆಗುವುದಿಲ್ಲ. ಇನ್ನೊಂದು ಕಡೆ ದಾವಣಗೆರೆಯಾವುದೋ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನವರು, ನಮ್ಮ ಊರು ನಗರಸಭೆಯ ವ್ಯಾಪ್ತಿಯಿಂದ ೨೮ ಕಿಲೋಮೀಟರ್ ಇದೆ ಅಲ್ಲಿಗೆ ಬಿ.ಟಿ.ಎಸ್. ಬಸ್‌ಗಳನ್ನು ಓಡಿಸಿ ಎಂದು ಕೇಳುತ್ತಾರೆ. ಈಗ ನಾವು ೨೨ ಕಿಲೋಮೀಟರ್‌ವರೆಗೆ ಪವಿತ್ರ ಬಿ.ಟಿ.ಎಸ್. ಬಸ್‌ಗಳನ್ನು ಓಡಿಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಅದನ್ನು ಮಾಡುತ್ತಿದ್ದೇವೆ. ಮುಂದೆ ಆಗಬೇಕು ಎಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಸಾರಿ ನಾನು ನಗರ ಸಾರಿಗೆ ಅಧಿಕಾರಿಗಳಿಗೆ ಕಾಗದ ಬರೆದು ಇದರ ಬಗ್ಗೆ ವಿನಂತಿ ಮಾಡಿಕೊಂಡಿದ್ದೇನೆ. ಆದರೆ ಅವರ ಕಿವಿಗೆ ಇದು ಬೀಳುತ್ತಿಲ್ಲ. ಸಾಕಷ್ಟು ಜನರ ಒತ್ತಡ ಶಾಸಕರ ಮೇಲಿರುವುದರಿಂದ ದೇವನಹಳ್ಳಿಗೆ ಬಿ.ಟಿ.ಎಸ್. ಬಸ್ ಓಡಿಸಬೇಕು. ಇದರಿಂದ ಜನಗಳಿಗೆ ಅನುಕೂಲ ಆಗುವುದಿಲ್ಲವೇ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಡಬೇಕು. ಲಘುವಾಗಿ ಉತ್ತರ ಕೊಡಬಾರದು.

ಅಧ್ಯಕ್ಷರು.—ಅನುಕೂಲಕರವಾದ ಉತ್ತರ ಹೇಳಿರಿ.

ಶ್ರೀ ಸಿದ್ಧರಾಮಯ್ಯ.—ಅಧ್ಯಕ್ಷರೇ, ಲಘುವಾಗಿ ಉತ್ತರ ಕೊಡತಕ್ಕ ಪ್ರಶ್ನೆ ಇಲ್ಲ. ನಾವು ಒಂದು ನಿಯಮವನ್ನು ಅಡಾಪ್ಟ್ ಮಾಡಿಕೊಂಡಿದ್ದೇವೆ. ಮೈಸೂರು ನಗರದ ಸುತ್ತ ೨೨ ಕಿಲೋಮೀಟರ್ ವ್ಯಾಪ್ತಿಯವರೆಗೆ ಮತ್ತು ಬೆಂಗಳೂರು ನಗರದ ಸುತ್ತ ೨೨ ಕಿಲೋಮೀಟರ್ ವ್ಯಾಪ್ತಿಯವರೆಗೆ ಸಿಟಿ ಬಸ್ ಓಡಿಸತಕ್ಕದ್ದು ಎಂದೂ ಮಾಡಿಕೊಂಡಿದ್ದೇವೆ. ದೇವನಹಳ್ಳಿ ವ್ಯಾಪಾರಸ್ಥಳ, ಅಲ್ಲಿಂದ ಬೇಕಾದಷ್ಟು

ಜನ ಓಡಾಡುತ್ತಿದ್ದಾರೆ ಎಂಬುದರ ಬಗ್ಗೆ ನನ್ನ ವಿವಾದ ಇಲ್ಲ. ಎಲ್ಲಾ ತಾಲ್ಲೂಕು ಕೇಂದ್ರಗಳಿಗೂ ಹೆಚ್ಚು ಜನ ಹೋಗಿಬರತಕ್ಕದ್ದು ಇದೆ. ನಗರಸಭೆ ವ್ಯಾಪ್ತಿಯಿಂದ ದೇವನಹಳ್ಳಿ ೨೫.೨ ಕಿಲೋಮೀಟರ್ ಇದ್ದು ಅದೊಂದಕ್ಕೇ ಸಿಟಿ ಬಸ್ ಓಡಿಸುವುದಕ್ಕೆ ಆಗುವುದಿಲ್ಲ. ಬೇರೆ ವಿಚಾರಗಳನ್ನೂ ಗಮನದಲ್ಲಿಟ್ಟು ಕೊಂಡು ಇದನ್ನು ಪರಿಶೀಲಿಸಬೇಕಾಗುತ್ತದೆ. ಬಸ್ ಓಡಿಸತಕ್ಕಂಥಾದ್ದನ್ನು ಒಂದು ಪಾಲಿಸಿಯಾಗಿ ನಾವು ತೀರ್ಮಾನ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಆಲೋಚನೆ ಮಾಡುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇವೆ.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ನೋಡಿರಿ.

ಶ್ರೀ ಪಿ ಸಿ. ವಂಸಿನ್ವಮಯ್ಯ.—ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಬೇಕಾದಷ್ಟು ತಡೆರಹಿತ ಬಸ್‌ಗಳನ್ನು ಹಾಕಿದ್ದಾರೆ. ಅವು ದೇವನಹಳ್ಳಿಯಲ್ಲಿ ನಿಲ್ಲುವುದಿಲ್ಲ. ದೇವನಹಳ್ಳಿಯಿಂದ ಸಾಕಷ್ಟು ಪ್ರಯಾಣಿಕರು ಇರುತ್ತಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೆಲಸ ಮಾಡಿ, ಶಾಸಕರ ಮೇಲಿರುವ ಸಾರ್ವಜನಿಕರ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಆಶ್ವಾಸನೆ ಕೊಡಬೇಕು. ಇದರಿಂದ ಸರಕಾರಕ್ಕೆ ಏನೂ ತೊಂದರೆಯಾಗುವುದಿಲ್ಲ. ಇಲಾಖೆಗೆ ಸಾಕಷ್ಟು ಲಾಭ ಬರುತ್ತದೆ. ಅನೇಕ ಸಾರಿ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿರುತ್ತೇನೆ. ಈ ಬಸ್‌ನ್ನು ಓಡಿಸಲೇಬೇಕು.

ಶ್ರೀ ಸಿದ್ಧರಾಮಯ್ಯ.—ಅವರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಉಡುಪಿಯಲ್ಲಿರುವ ಸ್ತ್ರೀ ಸೇವಾ ನಿಕೇತನ ಹಾಗೂ ಬಾಲಕಿಯರ ಪ್ರಮಾಣಿತ ಶಾಲೆ ಸಂಸ್ಥೆಗಳ ಬಗ್ಗೆ.

೫೦೫೧. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಹಾಗೂ ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಉಡುಪಿಯಲ್ಲಿರುವ ಸ್ತ್ರೀ ಸೇವಾ ನಿಕ್ಷೇತನ ಹಾಗೂ ಬಾಲಕಿಯರ ಪ್ರಮಾಣಿತ ಶಾಲೆ ಸಂಸ್ಥೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ನಿಜವೇ?

(ಆ) ಉಡುಪಿಯಲ್ಲಿರುವ ಸ್ತ್ರೀ ಸೇವಾ ನಿಕೇತನದ ಕಟ್ಟಡವು ತಯಾರಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಇದುವರೆವಿಗೂ ಕಟ್ಟಡವನ್ನು ಸ್ವಾಧೀನತೆಗೆ ತೆಗೆದುಕೊಳ್ಳದಿರಲು ಕಾರಣಗಳು ಯಾತ್ತು ಎಂದು ಸ್ವಾಧೀನತೆ ತೆಗೆದುಕೊಳ್ಳಲಾಗುವುದು?

ಶ್ರೀ ಪಿ.ಜಿ.ಆರ್. ಸಿಧ್ಯಾ (ಸಮಾಜ ಕಲ್ಯಾಣ ಸಚಿವರು).—

(ಅ) ನಿಜ

(ಆ) ಕಾಮಗಾರಿಯು ಇನ್ನೂ ಪೂರ್ಣಗೊಂಡಿಲ್ಲ.

(ಇ) 'ಆ' ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್. ಸನ್ಮಾನ್ಯ ಸಭಾಧ್ಯಕ್ಷರೇ, ಈ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಸಚಿವರು ಉತ್ತರ ಕೊಟ್ಟಿದ್ದಾರೆ. ಅದು ಯಾವ ಹಂತದಲ್ಲಿದೆ ಎಂದು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಪಿ.ಜಿ.ಆರ್. ಸಿಧ್ಯಾ.—ಬಿಲ್ಡಿಂಗ್ ಸಂಪೂರ್ಣವಾಗಿ ಮುಗಿದಿದೆ. ಕಾಂಪೌಂಡ್ ಹಾಕಬೇಕೆಂದು ಅಧಿಕಾರಿಗಳು ವರದಿಯನ್ನು ಕಳುಹಿಸಿದ್ದಾರೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನನಗೆ ತಿಳಿದಮಟ್ಟಿಗೆ ಅಲ್ಲಿ ಕಂಪೌಂಡ್ ಅಷ್ಟು ಆಗತ್ಯ ಇಲ್ಲ ಕುಡಿಯುವ ನೀರಿನ ಸರಬರಾಜು ಇಲ್ಲದೆ ಇರುವುದರಿಂದ, ಬಹಳ ತೊಂದರೆಯಾಗಿದೆ. ಳೆದ ಅಧಿವೇಶನದಲ್ಲಿ ಮಾನ್ಯ ಬಸಪಣ್ಣಪ್ಪನವರು ಒಂದು ತಿಂಗಳಲ್ಲಿ ಮಾಡಿ ಮುಗಿಸುತ್ತೇವೆ ಎಂಬ